# ಅಧ್ಯಾಯ 29

**ಓಂ ಗಣೇಶಾಯ ನಮಃ    ಸದ್ಗುರು ಸಿದ್ಧಾರೂಢ ನಮಃ**



ಛಂದ: ಅರಕೃಪೆಯಿಂ ಬ್ರಹ್ಮನಿರ್ಗುಣ ಲಭಿಸುವುದು ಬಹು ಸುಗಮದಿ
ಆರು ಭಕ್ತರ ಭಾರ ವಹಿಸುತ ಸಲಹುವನು ಬಹುಪ್ರೇಮದಿ ಆತನೇ
ನಿಜಭಕ್ತನಿಗೆ ಮೃತ್ಯುವಿನ ಮುಖದಿಂ ಬಿಡಿಸಿದ ಆತನೇ ಬಹು ಮಾತ್ರೆಗಳ
ನುಂಗಿಯೆ ಸುಖದಿ ಸಲೆ ಬದುಕಿದ

ಯಾವದು ಪರಿಪೂರ್ಣ ಸಚ್ಚಿದಾನಂದ ವಸ್ತು ಇರುವುದೋ , ಅದೇ ಸದ್ಗುರುವು ತಾನಾಗಿರುತ್ತಾನೆ. ಇಂಥಾ ಸದ್ಗುರುವಿಗೆ ನಮಸ್ಕರಿಸಿ, ಚಿತ್ತದ ಮಲಿನತ್ವವನ್ನು ತೊಳೆಯುವನು. ಹರಿಹರರು ಯಾರೊಬ್ಬನ ಮೇಲೆ ಸಿಟ್ಟಾದರೂ, ಸದ್ಗುರುವು ಆತನನ್ನು ರಕ್ಷಿಸುತ್ತಾನೆ. ಗುರು ತಿರಸ್ಕಾರ ಮಾಡಿದ್ದಾದರೆ, ಅಂಥವನನ್ನು ಸಂಭಾಳಿಸುವವರು ಯಾರೂ ಇಲ್ಲ. ಸದ್ಗುರುವಿನ ಕೃಪಾ ಇಲ್ಲದಿದ್ದರೆ, ದೇಹವಾದರೂ ಹ್ಯಾಗೆ ಉಳಿಯುವುದು ? ದೇಹಬುದ್ಧಿ ಸಮ್ಮಂಧ ಆಗುವ ತಾಪಗಳನ್ನು ಯಾರು ಸಹಿಸಬೇಕು ? ದೇಹತ್ಯಾಗ ಮಾಡಿದರೆ ಏನೂ ಸಿಗುವದು, ಎಂದು ಹೀಗೆ ಕಲ್ಪನಾ ಮಾಡಬೇಡಿರಿ; ಗುರುವಿರಹದ ಸಂಸ್ಕಾರದಿಂದಲೇ ಪುನಃ ಜನ್ಮವನ್ನು ಹೊಂದುವೆನು. ಒಂದು ಜನ್ಮದಲ್ಲಿ ಗುರುಕೃಪಾ ಆಗದೇ ಹೋದರೆ ಸಹಸ್ರ ಜನ್ಮಗಳನ್ನು ಪಡೆಯುವೆನು. ಆದರೂ ಅಂತರ್ಯಾಮಿಯಾದ ಸದ್ಗುರುವಿನ ಚರಣಗಳನ್ನು ಬಿಡಲಾರೆನು. ಕೃಪಾಘನನು ಒಲಿಯದಿದ್ದರೆ, ಜಾತಕ ಪಕ್ಷಿಯಂತಿರುವ ನಾನು ಎಲ್ಲಿ ಬದುಕುವೆನು ? ಹಾಗೆ

ಕೃಪಾಧಾರೆಯ ಸೇವನೆ ವಿನಃ ಪ್ರಪಂಚ ಫಲಗಳನ್ನು ತಿಂದು ನಾನು ಎಂದೂ ಜೀವಿಸಲಾರೆನು. ಸದ್ಗುರುವಾದ ನೀನು ಸಮೀಪವಿಲ್ಲದಿದ್ದರೆ ನಿನ್ನ ದಾಸನಾದ ನಾನು ವ್ಯರ್ಥವಾಗಿ ಹೋಗುತ್ತಿದ್ದೆ. ಬಾಲಕನ ಮೇಲೆ ದಯಮಾಡಿ ನೀನೇ ಬದುಕಿಸಿದಿ. ಅದರೆ ದೇಹ ರಕ್ಷಿಸಿದ್ದು, ಇದು ನಿಜವಾದ ಕೃಪೆಯಲ್ಲ, ಸ್ವರೂಪ ತೋರಿಸುವದೆ ಸತ್ಯವಾದ್ದಾಗಿರುವದು. ದೇಹಾತೀತ ಸ್ಥಿತಿಯನ್ನು ನಾನು ಕಂಡೆನೆಂದರ, ಗುರು ಒಲಿದನೆಂದು ತಿಳಿಯುವೆನು. ಹೇ ಶ್ರೋತ ಜನರುಗಳಿರಾ, ಮುಂದಿನ ಕಥಾನುಸಂಧಾನವನ್ನು ಶ್ರವಣ ಮಾಡಿರಿ, ಸಿದ್ಧ ಸದ್ಗುರು ತಾನೇ ಚರಿತ್ರ ಕಥನವನ್ನು ಹೇಳುವನು.

ಸಿದ್ಧಾಶ್ರಮದಲ್ಲಿ, ಪರಸ್ಥಳದ ಜನರಿಗೋಸ್ಕರ ಒಂದು ಹೊಸ ಇಮಾರತಿಯನ್ನು ಕಟ್ಟಿಸುತ್ತಿದ್ದರು. ಅಲ್ಲಿ ನಿತ್ಯ ಸದ್ಭಕ್ತರು ಬಂದು ಅದ್ಭುತವಾದ ಸೇವೆ ಕೆಲಸಗಳನ್ನು ಮಾಡುತ್ತಿದ್ದರು. ಅನೇಕರು ಸೇವೆಗೋಸ್ಕರ ಬಂದು, ಬಹು ಪ್ರೇಮದಿಂದ ಗುರುಸೇವಕರಾಗಿ ನಿಂತು, ಒಬ್ಬರ ಮುಂದೆ ಒಬ್ಬರು ಹೋಗಿ, ಉತ್ತಮ ರೀತಿಯಿಂದ ಸೇವಾ ಮಾಡುತ್ತಿದ್ದರು. ತನಗೆ ಸೇವಾ

ಸಿಕ್ಕಿತೋ ಇಲ್ಲವೋ ಎಂಬುದೊಂದೇ ಭೀತಿಯು ಸದ್ಗುರು ಸೇವೆಯೊಳಗೆ ಇರುವದು. ಆ ಸಮಯದಲ್ಲಿ ಶಿವಪ್ಪನೆಂಬ (ಈತನಿಗೆ ಶಿವರಾಯನೇತಲೂ ಕರೆಯುತ್ತಾರೆ ) ಒಬ್ಬ ಭಕ್ತನು ಆತುರದಿಂದ ಮುಂದೆ ಬಂದು, ಯಾರೂ ಹಿಡಿಯದಿರುವ ಒಂದು ನಿಚ್ಚಣಿಕೆಯನ್ನು ತೀವ್ರವಾಗಿ ಹತ್ತಿದನು. ತುದೀ ಹಲ್ಲಿನ ಮೇಲೆ ಕಾಲಿಡುವಾಗ, ನಿಚ್ಚಣಿಕೆಯು ಅಕಸ್ಮಾತ್ತಾಗಿ ಜಾರಿ, ನೆಲದ ಮೇಲೆ ಬಿತ್ತು. ಶಿವಪ್ಪನೂ ನೆಲಕ್ಕೆ ಅಪ್ಪಳಿಸಿದಂತೆ ಬೀಳುವಾಗ, ಕೆಳಗಿನ ಕಟ್ಟೆಯ ಕಲ್ಲಿನ ಏಣು ತಲೆಗೆ ಭರದಿಂದ ಬಡೆದು, ತತ್ಕಾಲ ಮೂರ್ಛಿತನಾದನು. ಸದ್ಗುರುರಾಜರು ಸಮೀಪವಿದ್ದು ಅವರೇ ಶಿವಪ್ಪನು ಬಿದ್ದದ್ದನ್ನು ಮೊದಲು ನೋಡಿದರು. ಇತರ ಅನೇಕ ಜನರು ಓಡಿ ಬಂದು ನೋಡುತ್ತಾರೆ, ಶಿವಪ್ಪನು ಬುಡಕ್ಕೆ ಬಿದ್ದು ಆತನ ಮೈಮೇಲೆ ನಿಚ್ಚಣಿಕೆ ಬಿದ್ದಿರುವುದು. ಒಬ್ಬನು ನಿಚ್ಚಣಿಕೆ ಎತ್ತುತ್ತಲೆ ರಕ್ತ ಹರಿಯುವುದು ಕಂಡು ಬಂತು. ಶಿವಪ್ಪನ ತಲೆಗೆ ಒಂದು ಕಂತವಾದ ಘಾಯವಾಗಿರುವದು ಮತ್ತು ಸರ್ವಾಂಗವು ರಕ್ತಮಯವಾಗಿರುವದನ್ನು ನೋಡಿ, ದಯಾವಂತರಾದವರು,

ಆತನ ಮೇಲೆ ತಣ್ಣೀರು ತಂದು ಸುರಿದರು. ಆದರೆ ಆತನು ಮೃತಪ್ರಾಯನಾಗಿ ಕಾಣಿಸುತ್ತಿರುವನು. ಎಷ್ಟು ಪ್ರಯತ್ನ ಪಟ್ಟರೂ, ಶಿವಪ್ಪನಿಗೆ ದೇಹದ ಮೇಲೆ ಸ್ಮೃತಿಬಾರದು. ಆಗ ದುಃಖದಿಂದ ಸಂತ್ರಪ್ತರಾಗಿ ಆತನ ಪತ್ನಿ ಪುತ್ರರು ಅಲ್ಲಿಗೆ ಬಂದು. ಶಿವಪ್ಪನ ಮುಖದೊಳಗಿಂದ ರಕ್ತ ಕೂಡಿದ ಬುರುಗು ಹೊರಬೀಳುತ್ತಿತ್ತು. ಇವನೇನೂ ಬದುಕುವ ಆಶಾ ಇಲ್ಲವೆಂದು ಎಲ್ಲರೂ ಅನ್ನಲಾರಂಭಿಸಿದರು. ಕೆಲವರು ವೈದ್ಯನನ್ನು ಕರೆಯಲಿಕ್ಕೆ ಓಡಿದರು. ಕೆಲವರು ಅನ್ನುತ್ತಾರೆ-" ವೈದ್ಯನನ್ನು ಏನು ಮಾಡುವದು ? ಜಲಾವ ಕಟ್ಟಿಗೆ ತೆಗೆದುಕೊಂಡು ಬನ್ನಿರಿ. ಈತನ ದೇಹಯಾತ್ರಾ ತೀರಿತು. ಸದ್ಗುರುಗಳ ಪಾದದಲ್ಲಿ ದೇಹ ಇಟ್ಟು, ಈತನು ಧನ್ಯನಾಗಿ ಹೋದನು", ಶಿವಪ್ಪನ ಪತ್ನಿ - ಪುತ್ರರು ಸದ್ಗುರು ಮುಖವನ್ನು ನೋಡಿ, ಆತನ ಚರಣಗಳ ಮೇಲೆ ಬಿದ್ದು, - 'ಹೇ ಸದ್ಗುರುರಾಯನೇ, ನೀನೇ ನಮ್ಮನ್ನು ರಕ್ಷಿಸುವಂಥವನಾಗು. ನಿನ್ನ ವಿನಃ ನಮಗೆ ಮತ್ಯಾರೂ ಇಲ್ಲವು. ಸರ್ವರನು ಬಿಟ್ಟು ನಾವು ನಿಮ್ಮ ಚರಣಗಳಲ್ಲಿ ಬಂದು ಬಿದ್ದಿರುವಾಗ, ನೀನು ಈ ಕಾಲದಲ್ಲಿ ಬಿರುದನ್ನು ಬಿಟ್ಟು

ಬಿಡಬೇಡ, ಏನು ಸಂಕಷ್ಟ ಪ್ರಾಪ್ತವಾದರೂ ನಾವು ನಿನ್ನನ್ನು ಬಿಟ್ಟು ಮತ್ತೆಲ್ಲಿಗೂ ಹೋಗಲಾರೆವು ನಮಗೆ ತಂದೆ ತಾಯಿಗಳಿಬ್ಬರೂ ನೀವೇ ಆಗಿರುತ್ತೀರಿ. ನಿಮ್ಮ ಚರಣಗಳಲ್ಲಿಯೇ ನಮ್ಮನ್ನು ಇಟ್ಟುಕೊಳ್ಳಿರಿ," ಅಂದರು. ಇಷ್ಟು ಹೊತ್ತಿನವರೆಗೆ ಶಿವಪ್ಪನನ್ನು ನೋಡುತ್ತ ಸ್ತಬ್ಧರಾಗಿ ಕೂತಿದ್ದ ಸದ್ಗುರುನಾಥರು, ಶಿವಪ್ಪನ ಸ್ತ್ರೀ ಪುತ್ರರ ವಚನವು ಕರ್ಣದಲ್ಲಿ ಬಿದ್ದ ಕೂಡಲೇ ಚಟ್ಟನೆ ಎದ್ದರು. ಶಿವಪ್ಪನ ಯಡಪಾರ್ಶ್ವದ ಕಪಾಲದೊಳಗಿಂದ ರಕ್ತಧಾರೆಯು ಹರಿಯುತ್ತಿತ್ತು. ಇದನ್ನು ನೋಡಿ, ಮಾತೆ ಆಗಿರುವ ಸದ್ಗುರುಗಳು ಶಿವಪ್ಪನ ಸಮೀಪ ಕುಳಿತುಕೊಂಡು, ಅವನ ಘಾಯಕ್ಕೆ ಹಸ್ತಸ್ಪರ್ಶ ಮಾಡಿದರು. ಕೂಡಲೇ ರಕ್ತಪ್ರವಾಹ ನಿಂತು ಹೋಯಿತು. ಆಮೇಲೆ ನಮಃ ಶಿವಾಯ ಅನ್ನುತ್ತ ಸರ್ವಾಂಗಕ್ಕೆ ಅಮೃತ ಹಸ್ತವನ್ನು ಸ್ಪರ್ಶಿಸುವಂಥವರಾಗಿ, ಅನ್ನುತ್ತಾರೆ - "ಈತನ ಆಯುಷ್ಯ ತೀರಿದಂತೆ ತೋರುತ್ತದೆ. ಆದರೆ ಮುಂದೆ ಈತನು ಮಾಡತಕ್ಕ ವಿಶೇಷ ಕಾರ್ಯವಿರುತ್ತದೆ. ಆದ್ದರಿಂದ ಏನಾದರೂ ಆಯುಷ್ಯ ಲೇಶದಿಂದ ಸದ್ಗುರುನಾಥನು ಈತನನ್ನು ಬದುಕಿಸತಕ್ಕದು'.

ಹೀಗಂದು ಸಿದ್ಧರು ಹಸ್ತದಲ್ಲಿ ಸ್ವಲ್ಪ ತಣ್ಣೀರು ತೆಗೆದುಕೊಂಡು, ಶಿವಪ್ಪನ ಮುಖದ ಮೇಲೆ ಪ್ರೋಕ್ಷಣೆ ಮಾಡಿ, ತೂಷ್ಣಿಂ ಸ್ಥಿತಿಯಲ್ಲಿರುವಂಥವರಾದರು. ಎಲ್ಲಾ ಭಕ್ತ ಜನರು, ಚಿತ್ತದೊಳಗಿನ ನರನಾರಿಯರಂತ ತಟಸ್ಥರಾಗಿ ನೋಡುತ್ತಿದ್ದರು. ಭಕ್ತನಾದ ಶಿವಪ್ಪನು ಬಿದ್ದದ್ದು ನೋಡಿ ಸ್ತ್ರೀಯರಿಗೆ ಕಣ್ಣೀರು ಸುರಿಯುತ್ತಿದ್ದವು. ಎಲ್ಲರೂ ಶಿವಪ್ಪನ ಕಡೆಗೆ ನೋಡುತ್ತಿರುವಾಗ ಮೆಲ್ಲಗೆ ಆತನ ತುಟಿಗಳು ಅಲ್ಲಾಡಲಾರಂಭಿಸಿದವು, ಮತ್ತು ಮುಖದಿಂದ "ರಾಮನಾಮದ " ಜಪವು ಹೊರಡುತ್ತಿತ್ತು. ಸರ್ವ ಜನರಿಗೆ ಈಗ ಆನಂದವಾಯಿತು. ಮತ್ತು ಎಲ್ಲರೂ ಜಯಜಯಕಾರವನ್ನು ಗರ್ಜಿಸುವಂಥವರಾದರು. ಸದ್ಗುರು ಮಹಿಮಾ ವರ್ಣಿಸಲಿಕ್ಕೆ ಯಾರೊಬ್ಬರಿಗೂ ಸಾಧ್ಯವಿಲ್ಲ. ಸಿದ್ಧರಾಯರಂದರು - "ನಿಶ್ಚಯವಾಗಿ ಸದ್ಗುರುರಾಯನು ಪ್ರಾಪ್ತನಾದನು. ಆದ್ದರಿಂದಲೇ ಶಿವಪ್ಪನು ಬದುಕಿದನು. ಇನ್ನು ಮೇಲೆ ಇವನಿಗೆ ಭಯವಿಲ್ಲ". ಕೆಲವು ದಿವಸಗಳ ಮೇಲೆ ಶಿವಪ್ಪನ ಪ್ರಕೃತಿಯು ಸುಧಾರಿಸಿ, ಪುನಃ ಆತನು ಅಧಿಕ ಪ್ರೇಮದಿಂದ ಗುರುಸೇವ

ಮಾಡಲಾರಂಭಿಸಿದನು. ಶ್ರೀ ಸಿದ್ಧ ಸದ್ಗುರು ಮಹಾರಾಜರು ಶರೀರ ತೊಟ್ಟಿರುವುದರಿಂದ, ಪ್ರಸಂಗದಲ್ಲಿ ರೋಗಗಳನ್ನು ಸ್ವೀಕರಿಸುತ್ತಿದ್ದರು; ಯಾಕೆಂದರೆ, ದೇಹವು ಸ್ವಾಭಾವಿಕವಾಗಿ ರೋಗದ ಬೀಜವಾಗಿರುತ್ತದೆ. ಒಮ್ಮೆ ಸಿದ್ಧರಿಗೆ ಮಹಾಜ್ವರವು ಪ್ರಾಪ್ತವಾಗಿ, ಬಹು ಕಷ್ಟದಿಂದ ನರಳುತ್ತಾ ಹಾಸಿಗೆಯ ಮೇಲೆ ಉರುಳ್ಯಾಡುತ್ತಿದ್ದರು. ಇದನ್ನು ನೋಡಿ ಭಕ್ತ ಜನರು ಬಹಳ ಘಾಬರಿಯಾಗಿ ಔಷಧ ಗುಳಿಗೆಗಳನ್ನು ತಂದು ಕೊಡುತ್ತಿದ್ದರು. ಸಿದ್ಧರು ಅವುಗಳನ್ನು ಹಾಸಿಗೆಯ ಬುಡಕ್ಕೆ ಇಟ್ಟು, "ಇನ್ನಷ್ಟು ನಿಂತು ತೆಗೆದುಕೊಳ್ಳುವೆನು," ಎಂದನ್ನುತ್ತಿದ್ದರು. ಒಂದು ದಿವಸ ಒಬ್ಬ ಪ್ರಸಿದ್ಧ ವೈದ್ಯನು ಬಂದು, ಬಹಳ ಅಮೋಘವಾದ ಮಾತ್ರೆಗಳೆಂದು ಕೊಟ್ಟು ಹೋದನು. ಸಿದ್ಧಾರೂಢರು, ಅವುಗಳನ್ನು ಹಾಸಿಗೆ ಬುಡಕ್ಕೆ ಇಟ್ಟರು. ಪ್ರತಿ ದಿನದಲ್ಲಿಯೂ ಭಕ್ತ ಜನರು ಔಷಧ ಗುಳಿಗೆಗಳನ್ನು ತಂದು ಕೊಡುತ್ತಿದ್ದರು, ಮತ್ತು ವೈದ್ಯನು ನಿತ್ಯ ಬಂದು ಜ್ವರವನ್ನು ಪರೀಕ್ಷಿಸಿ ಮಾತ್ರೆಗಳನ್ನು ಕೋಟ್ಟು ಹೋಗುತ್ತಿದ್ದರು. ಆದರೆ ರೋಗವು ಏನೇನು ಕಡಿಮೆಯಾಗಿದೆ ಇದ್ದದ್ದನ್ನು ನೋಡಿ, ಒಂದು ದಿನ,

ವೈದ್ಯನು ಸದ್ಗುರುಗಳನ್ನು ಕುರಿತು - "ಮಹಾರಾಜರೆ, ರೋಗವು ಏನೇನು ಕಡಿಮೆಯಾಗಲಿಲ್ಲ. ನನ್ನ ಗುಳಿಗೆಗಳು ಅಮೋಘವಾಗಿದ್ದವು. ಅವುಗಳನ್ನು ಉಪಯೋಗಿಸಿದ್ದಾದರೆ ಜ್ವರವೂ ಅವಶ್ಯವಾಗಿ ಕಡಿಮೆಯಾಗಬೇಕಿತ್ತು. ನೀವು ಅವನ್ನು ತಗೆದುಕೊಂಡಿರಲಿಕ್ಕಿಲ್ಲ. ರೋಗವು ಹ್ಯಾಗೆ ಹೋದೀತು ? ಆದ್ದರಿಂದ ದೈನ್ಯಭಾವದಿಂದ ನಿಮ್ಮನ್ನು ಕುರಿತು ಪ್ರಾರ್ಥಿಸುವದೇನೆಂದರ - ಈಗಲಾದರೂ ಔಷಧವನ್ನು ಸ್ವೀಕರಿಸಿ, ಭಕ್ತರ ಇಚ್ಚೆಯನ್ನು ಪಾಲನ ಮಾಡಿ, ದೇಹವನ್ನು ನಮಗೋಸ್ಕರ ರಕ್ಷಿಸತಕ್ಕದ್ದು", ಎಂದು ವೈದ್ಯನು ಅನ್ನಲು, ಸದ್ಗುರುಗಳು ಹಾಸ್ಯವದನದಿಂದ- "ನಿನ್ನ ಆಗ್ರಹವಿರುವದಾದರೆ " ಈಗಲೇ ಎಲ್ಲಾ ಔಷಧವನ್ನು ತೆಗೆದುಕೊಳ್ಳುವೆನು', ಎಂದು ಎದ್ದರು. ಹಾಸಿಗೆ ಬುಡಕ್ಕೆ ಕೈಹಾಕಿ, ಮುಷ್ಠಿ ತುಂಬ ಗುಳಿಗೆಗಳನ್ನು ತೆಗೆದುಕೊಳ್ಳುವೆನು ಬಾಯಿ ತೆಗೆದುಕೊಂಡು, ಅಷ್ಟೂ ಹಾಕಿಕೊಂಡು ನುಂಗಿಬಿಟ್ಟರು. ಇದನ್ನು ನೋಡಿ ವೈದ್ಯನು ಘಾಬರಿಯಾಗಿ - "ಅಪರಾಧವಾಯಿತು" ಎಂದು ತನ್ನ ಮುಖದ ಮೇಲೆ ಬಡಿದುಕೊಂಡು ನೆಲದ ಮೇಲೆ ಬಿದ್ದು

ದುಃಖದಿಂದ ಊರುಳ್ಯಾಡಲಾರಂಭಿಸಿದನು. ಅಲ್ಲಿದ್ದ ಅನೇಕ ಜನರು ಸಹಾ ಬಹು ಖಿನ್ನರಾಗಿ, - "ಇನ್ನು ಮೇಲೆ ಆಸೆ ಹಿಡಿಯುವುದು ವ್ಯರ್ಥವು. ನಮ್ಮ ಪುಣ್ಯವು ಇಂದಿಗೆ ತೀರಿತು" ಅನ್ನುವಂಥವರಾದರು. ಅಷ್ಟರಲ್ಲಿ ಸಿದ್ದರು ಎದ್ದು ನಿಂತು - 'ನನಗೇನೇನೂ ವ್ಯಥೆ ಇಲ್ಲ, ವ್ಯರ್ಥವಾಗಿ ಯಾಕೆ ಗಡಬಡಿಸುತ್ತೀರಿ. ರೋಗವು ನನಗೆ ಎಂದೂ ಬಂದಿದ್ದಿಲ್ಲ. ನನಗೆ ಜನ್ಮ ಮರಣಗಳು ಇಲ್ಲೆ ಇಲ್ಲ; ಶರೀರವೇ ಇಲ್ಲ, ರೋಗ ಎಲ್ಲಿಂದ ಬರುವದು! ನಾನು ಯಾರು ಏನೆಂಬುದು ನಿಮ್ಮಿಂದ ತಿಳಿಯಲಾಗದು," ಎಂದು ಅನ್ನುತ್ತಾ, ಅಡ್ಡಾಡಲಿಕ್ಕೆ ಆರಂಭಿಸಿದರು. ಹದಿನೈದು ದಿವಸಗಳ ತನಕ ಜ್ವರದಿಂದ ಹಾಸಿಗೆ ಹಿಡಿದು ಮಲಗಿದವರು ಕ್ಷಣದಲ್ಲಿ ಎದ್ದು, ಸಶಕ್ತರಿದ್ದಂತೆ ಓಡ್ಯಾಡುವದನ್ನು ನೋಡಿ, ಸರ್ವರೂ ಆಶ್ಚರ್ಯಪಟ್ಟು ಅನ್ನುತ್ತಾರೆ. - ಮಹಾತ್ಮರ ಮಹಿಮಾ ಇಷ್ಟೇ ಎಂದು ಸೀಮಾ ಹತ್ತುವದಿಲ್ಲ. ನಮ್ಮ ಭ್ರಮೆಯಿಂದ ಅವರು ನಮ್ಮಂತೆ ಶರೀರಯೆಂದು ತಿಳಿಯುತ್ತೇವೆ. ಯಾವಾತನ ಪಾದ ತೀರ್ಥದ ಪ್ರಭಾವದಿಂದ ನಾವು ಮಹಾರೋಗಗಳಿಂದ

ಮುಕ್ತರಾಗುವೇವೂ,ಆ ಸದ್ಗುರುರಾಯನಿಗೆ ನಾವು ಔಷಧವನ್ನು ಕೊಟ್ಟು, ಮೂರ್ಖತ್ವವನ್ನು ಪ್ರಾಪ್ತಿ ಮಾಡಿಕೊಂಡೆವು." ಈ ಪ್ರಕಾರವಾಗಿ ಸದ್ಗುರು ಮಹಿಮೆ ವರ್ಣಿಸುತ್ತಾ, ಆ ಜನರೆಲ್ಲರು ತಮ್ಮ ಗೃಹಗಳಿಗೆ ಹೋಗುವಾಗ "ನಮ್ಮ ಅದ್ಭುತವಾದ ದೈವಯೋಗದಿಂದ ಇಂಥಾ ಸದ್ಗುರುನಾಥನನ್ನು ನಾವು ಹೊಂದಿರುವೆವು", ಎಂದು ಅನ್ನುತ್ತಿದ್ದರು. ಹೇ ಶ್ರೋತಾ ಜನರುಗಳಿರಾ, ಲಕ್ಷ್ಯಾರ್ಥವನ್ನು ಶ್ರವಣ ಮಾಡುವಂಥವರಾಗಿರಿ, ಶಿವಪ್ಪನೆಂಬ ಜೀವನ ಪರಮಾರ್ಥ ಸಾಧಿಸುವತ್ತಿರುವಾಗ, ಸಪ್ತ ಭೂಮಿಕಾ ರೂಪ ನಿಚ್ಚಣಿಕೆಯನ್ನು ಹತ್ತುತ್ತಿದ್ದು, ಕಡೆಯ ಭೂಮಿಕೆ ಮೇಲೆ ಕಾಲು ಇಡುವಾಗ ಪ್ರಮಾದದಿಂದ ಬಿದ್ದನು. /ಶ್ಲೋಕ:- ನಪ್ರಮಾದಾದ ನರ್ಥೋಽನ್ಯೋ ಜ್ಞಾನಿನಃ ಸ್ವಸ್ವರೂಪತಃ ತತೋಽಮೋಹಸ್ತತೋಽಹಂಧೀ ಸ್ತತೋ ಬಂಧಸ್ತತೋ ವ್ಯಥಾ // ಟೀಕಾ// ಭಗವಾನ ಶಂಕರಾಚಾರ್ಯರು, ವಿವೇಕ ಚೂಡಾಮಣಿಯೆಂಬ ಗ್ರಂಥದಲ್ಲಿ ಹೀಗೆನ್ನುತ್ತಾರೆ. ಸ್ವಸ್ವರೂಪದಲ್ಲಿರುವ ಜ್ಞಾನಿಗೆ ಪ್ರಮಾದದ (ವಿಸ್ಮೃತಿ)ಕ್ಕಿಂತ

ಹೆಚ್ಚಿನ ಅನರ್ಥವು ಇಲ್ಲ. ಅದರಿಂದ ಮೋಹವು, ಅದರಿಂದ ಅಹಂಬುದ್ಧಿ, ಬಂಧದಿಂದ ವ್ಯಥೆಯು ಪ್ರಾಪ್ತವಾಗುವದು. ಈ ಪ್ರಕಾರ ಪ್ರಮಾದರೂಪ ಪತನವು ಜೀವನಿಗೆ ಪ್ರಾಪ್ತವಾಗಲು, ಸಂಸಾರವೆಂಬ ಕಲ್ಲಿಗೆ ಬಡೆದು ವಿಕ್ಷೇಪರೂಪ ಘಾಯವಾಯಿತು. ಆ ಸಮಯದಲ್ಲಿ ವಿವೇಕನೆಂಬ ಪುತ್ರನು ಮತ್ತು ಭಕ್ತಿ ಎಂಬ ಪತ್ನಿ ಇವರು ಬಂದು, ಜೀವನಿಗೆ ಪೂರ್ವಸ್ಥಿತಿಗೆ ತರಬೇಕೆಂದು ಸದ್ಗುರುವಿಗೆ ಪ್ರಾರ್ಥಿಸುವಂಥವರಾದರು. ಸದ್ಗುರುವು ಬೋಧಹಸ್ತದಿಂದ ಸ್ಪರ್ಶಿಸಿದ ಕೂಡಲೇ, ದುಃಖರೂಪ ರಕ್ತ ಪ್ರವಾಹವು ನಿಂತು ಹೋಯಿತು. ಜೀವನಿಗೆ ಸ್ವಸ್ವರೂಪಾವಸ್ಥೆ ಪ್ರಾಪ್ತವಾದ ಕೂಡಲೇ ಆತನು ಜಾಗ್ರತನಾದನು. ಎರಡನೇ ಕಥೆಯ ಲಕ್ಷ್ಯಾರ್ಥವೇನೆಂದರೆ, ಸಿದ್ಧ ಸದ್ಗುರುವೇ ಪ್ರತ್ಯಗಾತ್ಮನು; ಇವನು ಅವಿದ್ಯಾ ರೋಗದಿಂದ ವ್ಯಾಪಿಸಿಕೊಂಡು, ಜೀವರೆಂಬ ಜನರಿಗೆ, ರೋಗಿಯೆಂಬತೆ ಕಾಣಿಸಿಕೊಳ್ಳುವಂಥವನಾದನು. ಅನೇಕ ಪ್ರಕಾರದ ಬೋಧರೂಪ ಔಷಧಿಗಳನ್ನು ಕೊಡುತ್ತಿದ್ದರು. ಆ ಸಮಯದಲ್ಲಿ ಸಾಂಖ್ಯನೆಂಬ ವೈದ್ಯನು ಬಂದು, ಅನೇಕ

ತತ್ವ ಸಂತತಿಯನ್ನು ಬೋಧಿಸಿ ಅವಿದ್ಯಾವಿಪತ್ತನ್ನು ಪರಿಹರಿಸಲಿಕ್ಕೆ ನೋಡುತ್ತಿದ್ದನು. ಪ್ರತ್ಯಗಾತ್ಮನಾದರೂ, ಸರ್ವಜ್ಞನಾಗಿದ್ದು, ಆ ಬೋಧಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ. ಆಮೇಲೆ ಭಕ್ತ ರಂಜನಾರ್ಥವಾಗಿ ಅಷ್ಟೂ ತತ್ವಗಳನ್ನು ನುಂಗಿದನು. ಅಂದರೆ ತನ್ನೊಳಗೆ ಐಕ್ಯಮಾಡಿಕೊಳ್ಳುವಂಥವನಾದನು. ಆಗ ಆ ಪ್ರತ್ಯಗಾತ್ಮ ದೇವನು ಅನ್ನುತ್ತಾನೆ- "ನನ್ನಲ್ಲಿ ಅವಿದ್ಯಾ ಎಂಬ ಹೆಸರು ಸಹಾ ಇಲ್ಲ. ನಾನು ಸ್ವಯಮೇವ ಅಸಂಗ ಬ್ರಹ್ಮವಾಗಿದ್ದು, ನಿತ್ಯ ಆರೋಗ್ಯ ರೂಪನಿರುವೆನು'; ಜೀವರು ಮತ್ತು ಮತವಾದಿಗಳೆ ಆನಂದಪಟ್ಟು - 'ಈತನ ದರ್ಶನವಾಯಿತು. ಆ ಪ್ರಸಾದದಿಂದ ನಮ್ಮ ರೋಗಗಳೆಲ್ಲಾ ಓಡಿಹೋದವು. ನಾವು ವ್ಯರ್ಥವಾಗಿ ಈತನಿಗೆ ರೋಗಿಯೆಂದು ತಿಳಿದವು', ಅಂದರು. ಹೇ ಶ್ರೋತಾ ಜನರುಗಳಿರಾ, ಮುಂದಿನ ಅಧ್ಯಾಯದಲ್ಲಿ ಮನೋಹರವಾದ ಕಥೆಯನ್ನು ಶ್ರವಣ ಮಾಡುವಂಥವರಾಗಿರಿ. ಯಾವುದರ ಶ್ರವಣ ಮಾತ್ರದಿಂದ ಸಂಸಾರವು ಮಿಥ್ಯಾ ಮತ್ತು ಅಸಾರವಾಗಿ ಹೋಗುವುದೋ , ಅದನ್ನೇ ಹೇಳುವೆನು.

ಎಂಬಲ್ಲಿಗೆ, ಶ್ರೀ ಸಿದ್ಧಾರೂಢ ಕಥಾಮೃತದೊಳ್ ಶ್ರವಣ ಮಾತ್ರದಿಂದ ಸರ್ವ ಪಾಪಗಳನ್ನು ಭಸ್ಮ ಮಾಡುವಂಥ ಅತಿ ಮಧುರವಾದ ಈ ಇಪ್ಪತ್ತೊಂಭತ್ತನೇ ಅಧ್ಯಾಯವನ್ನು ಶಿವದಾಸನು ಶ್ರೀ ಸದ್ಗುರು ಸಿದ್ಧಾರೂಢರ ಚರಣಾರವಿಂದಗಳಲ್ಲಿ ಅರ್ಪಿಸುವನು.